ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೮ ಕೊಪ್ಪ ೧೦–೧೦–೮೨ ಭಾನುವಾರ ಬೆಲೆ ೪೦ ಪೈಸೆ

ಜಲಸಮಾಧಿಯಾದ ಗಣಪಗೆ ಮನುಷ್ಯನಿಂದ ಮುಕ್ತಿ

ಕೆಸವೆ: ಇಲ್ಲಿನ ರಮ್ಯ ಪರಿಸರದಲ್ಲಿರುವ ಕಮಂಡಲ ಗಣಪತಿಯು ಮೂರ್ತಿ ಸೂರಪ್ಪ ಗೌಡ ಎಂಬವರ ಮಹದಾಸೆಯಿಂದಾಗಿ ೩ ದಿನ ಜಲಸಮಾಧಿ ಅನುಭವಿಸಿ, ಕಡೆಗೆ ಅಧಿಕಾರಿ–ರಾಜಕಾರಣಿಗಳ ರೂಪದಲ್ಲಿ ಪ್ರತ್ಯಕ್ಷವಾದ ಮನುಷ್ಯನ ಸಂಧಾನದಿಂದ ಮುಕ್ತಿ ಪಡೆದ 'ಪುಣ್ಯ ಕಥೆ' ಈಗ ಮನೆ ಮಾತಾಗಿದೆ.

ಊರಿನ ಯುವಕ ಯುವತಿಯರು ಶ್ರಮದಾನದಿಂದ ಗಣಪತಿಗೊಂದು ನೆಲೆ ಕಾಣಿಸುತ್ತಿದ್ದಾಗ ಮಧ್ಯೆ ಅಡ್ಡ ಬಂದ ಈ ಗೌಡರು, ನೀರು ಹೊರಗೆ ಹೋಗಲು ಹಾಕಿದ್ದ ಪೈಪು ಒಡೆದು, ಅಂಗಳದಲ್ಲಿ ಕಾಲುವೆ ತೋಡಿ, ಗಣಪತಿಗೆ ನೆಲೆಯೇನು, 'ಸದ್ಗತಿ'ಯನ್ನೇ ಕಾಣಿಸ ಹೊರಟಿದ್ದರಂತೆ! ಗಾಂಧಿ ಹುಟ್ಟಿದ ಪುಣ್ಯ ತಿಥಿಯಂದು ಗಣಪನ ಈ 'ಶಾಪ ವಿಮೋಚನೆ'ಯ ಕತೆ ನಡೆಯಿತಂತೆ.

ಬಂಡಿಗಡಿಯಲ್ಲಿ ಕಳುವಾಗಿದ್ದ ಲಕ್ಷಾಂತರ ರೂ. ಬೆಲೆಯ

ಪಂಚಲೋಹ ವಿಗ್ರಹ ಪತ್ತೆ

ಕೊಪ್ಪ: ವಿದೇಶಕ್ಕೆ ಸಾಗಿಸಿದ್ದರೆ ಲಕ್ಷಾಂತರ ರೂ. ಬೆಲೆ ಬಾಳುವಂತಿದ್ದ ಕಳುವಾದ ಪುರಾತನ ವಿಗ್ರಹವೊಂದನ್ನು ಕೊಪ್ಪ ಪೋಲೀಸರು ಪತ್ತೆಹಚ್ಚಿದ್ದಾರೆ.

ಬಂಡಿಗಡಿಯ ಅಗ್ರಹಾರದ ರಾಮಕೃಷ್ಣ ಭಟ್ಟರ ಮನೆಯಿಂದ ಸುಮಾರು ೧ ವರ್ಷದ ಹಿಂದೆ ಕಳುವಾಗಿದ್ದ ಸುಮಾರು ೫೦೦ ವರ್ಷ ಹಿಂದಿನದೆಂದು ಹೇಳಲಾದ ಎರಡೂವರೆ ಕಿಲೋ ತೂಕದ ಪಂಚಲೋಹದ ಗಣಪತಿ ವಿಗ್ರಹವೊಂದನ್ನು ಕೊಪ್ಪ ಪೋಲೀಸರು ಹಾಲ್ಮತ್ತೂರು ಗ್ರಾಮದ ಕುಡುನೆಲ್ಲಿಯ ಮನೆಯೊಂದರಿಂದ ವಶಪಡಿಸಿಕೊಂಡಿದ್ದಾರೆ. ವ್ಯಾಪಾರ ಕುದುರುತ್ತಿದ್ದುದನ್ನು ತಿಳಿದವರೊಬ್ಬರು ನೀಡಿದ ಸುಳಿವಿನ ಮೇರೆಗೆ ಕೊಪ್ಪ ಸಬ್ ಇನ್ಸ್‌ಪೆಕ್ಟರ್ ಶಿರಗುಪ್ಪಿ, ಚಿದಂಬರ ಜೋಯಿಸ್, ರಾಜಪ್ಪ, ಮರುಳಸಿದ್ದಯ್ಯ, ಸತೀಶ್ ಇವರುಗಳೊಂದಿಗೆ ದಾಳಿನಡೆಸಿದರು. ಈ ಸಂಬಂಧ ಜಯರಾಮನೆಂಬೊಬ್ಬನನ್ನು ಬಂಧಿಸಿ ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಗಿದ್ದು, ತಲೆ ತಪ್ಪಿಸಿಕೊಂಡಿರುವ ಇನ್ನೂ ಮೂವರಿಗಾಗಿ ತೀವ್ರ ಶೋಧನಡೆಯುತ್ತಿರುವುದಾಗಿಗೊತ್ತಾಗಿದೆ.

ವಿಗ್ರಹಕ್ಕೆ ಹಿಂದೆ ೭೫ ಸಾವಿರ ರೂ. ವರೆಗೆ ಗಿರಾಕಿ ಬಂದಿತ್ತು ಎನ್ನಲಾಗಿದೆ. ವಿಗ್ರಹ ಕೊಪ್ಪ ಪೋಲೀಸರ ವಶದಲ್ಲಿದೆ.

ಸಹಕಾರ ಸಂಘದ ಉಗ್ರಾಣ ಉದ್ಘಾಟನೆ.

ಕಾನೂರು : ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘದ ಉಗ್ರಾಣದ ಹೊಸ ಕಟ್ಟಡವನ್ನು ಅ. ೫ ರಂದು ಬೇಗಾನೆ ರಾಮಯ್ಯ ಉದ್ಘಾಟಿಸಿದರು. ನ. ರಾ. ಪುರ ತಾ॥ ಅ॥ ಮಂಡಳಿ ಅಧ್ಯಕ್ಷ ಜೆ. ಟಿ. ಚಿನ್ನಯ್ಯ ಗೌಡರು ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಆರ್. ದಯಾನಂದ ಕಶ್ಯಪ್ ಮುಖ್ಯ ಅತಿಥಿಗಳಾಗಿದ್ದರು. ಕಟ್ಟಡಕ್ಕಾಗಿ ನಿವೇಶನ ದಾನಮಾಡಿದ ಕಾನೂರು ಸುಬ್ಬರಾಯರನ್ನು ಹಾಗೂ ಬೇಗಾನೆಯವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕೃಷಿ ಇಲಾಖೆಯಿಂದ

ಕಾಂಪೋಸ್ಟ್ ಸಪ್ತಾಹ

ಕೊಪ್ಪ: ಈ ಸಲದ ಗಾಂಧಿ ಜಯಂತಿಯ ಅಂಗವಾಗಿ ಇಲ್ಲಿನ ಕೃಷಿ ಇಲಾಖೆ ಕೃಷಿ ವಿಸ್ತರಣಾ ಯೋಜನೆಯಡಿ ಒಂದು ವಾರ ಕಾಲ ತಾಲೂಕಿನ ವಿವಿಧೆಡೆ ಕಾಂಪೋಸ್ಟ್ ಗೊಬ್ಬರದ ತಯಾರಿಕೆಯ ಪ್ರಚಾರ ಕಾರ್ಯಕ್ರಮ ನಡೆಸಿತು. ಸ॥ ಕೃಷಿ ನಿರ್ದೇಶಕ ಎಂ.ಎಸ್. ಸುಬ್ಬಯ್ಯಗೌಡ ಕಾಂಪೋಸ್ಟ್ ತಯಾರಿಕೆಯ ವಿಧಾನವನ್ನು ಎಲ್ಲೆಡೆ ವಿವರಿಸಿದರು.

ಸಾಲ ಕೊಡದ (ಅ)ಸಹಕಾರ ಬ್ಯಾಂಕು !

ಕೊಪ್ಪ: ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಮಂಜೂರು ಮಾಡಿ ಸಹಕಾರ ಸಂಘಗಳ ಮೂಲಕ ಆಗಸ್ಟ್ ನಲ್ಲೇ ಹಂಚಿಕೆಯಾಗುತ್ತಿದ್ದ ಬೆಳೆ ಸಾಲಗಳು ಈ ವರ್ಷ ಇನ್ನೂ ಮಂಜೂರಾಗಿಲ್ಲವೆಂದು ಕೆಲವು ಸಹಕಾರ ಸಂಘಗಳು ದೂರಿವೆ.

"ಅಪೆಕ್ಸ್ ಬ್ಯಾಂಕಿನಿಂದಲೇ ಹಣ ಬಂದಿಲ್ಲ" ಎಂದೂ, ವಸೂಲಿ ಸರಿಯಾಗಿ ಆಗದ್ದರಿಂದ ಸಾಲ ಕೊಡಲು ತೊಂದರೆ ಯಾಗಿದೆಯೆಂದೂ ಜಿಲ್ಲಾ ಬ್ಯಾಂಕು ನೆಪಗಳನ್ನು ಹೇಳುತ್ತಿದೆಯೆನ್ನಲಾಗಿದೆ. ಆದರೆ, ಲಕ್ಷಗಟ್ಟಲೆಯ ಬೇಡಿಕೆಗಳು ಹೋಗಲಿ, ಹತ್ತು–ಹದಿನೈದು ಸಾವಿರದ ಬೇಡಿಕೆಗಳನ್ನಾದರೂ ಜಿಲ್ಲಾ ಬ್ಯಾಂಕಿನವರು ಮನಸ್ಸಿದ್ದರೆ ಹೊಂದಿಸಬಹುದು ಎನ್ನುವ ಸಹಕಾರ ಸಂಘಗಳವರು, ವಸೂಲಿ ಅತ್ಯುತ್ತಮವಾಗಿರುವಲ್ಲಿ ಕೂಡ ಸಾಲ ಮಂಜೂರು ಮಾಡಿಲ್ಲ ಎಂದಿದ್ದಾರೆ.

ಸಾಲದ ಒಂದಂಶವಾಗಿ ಹಂಚಲಾಗುವ ಗೊಬ್ಬರವನ್ನಾದರೂ ರೈತರಿಗೆ ಹಂಚಲು ಅವಕಾಶ ಕೊಡಬೇಕೆಂಬ ಸಂಘಗಳ ಕೋರಿಕೆಗೂ ಒಪ್ಪಿಗೆ ಸಿಕ್ಕಿಲ್ಲ ವೆನ್ನಲಾಗಿದೆ.

ಬಹುಪಾಲು ಕಾಫಿ ಬೆಳೆಗಾರರಿಗೆ ಜಿಲ್ಲೆಯಲ್ಲಿಸಾಲ ಹಂಚಿಕೆ ಮುಗಿದು ಹೋಗಿದ್ದು, ಭಾರಿ ಭಾರಿ ರೈತ ಮುಂದಾಳುಗಳೆನ್ನಿಸಿಕೊಂಡವರೇ ಬ್ಯಾಂಕಿನ ನಿರ್ದೇಶಕ ಮಂಡಳಿಯಲ್ಲಿದ್ದೂ ಈ ತಾರತಮ್ಯವಾದರೆ ಹೇಗೆ ಎಂದು ಅವರ ಪ್ರಶ್ನೆ.

ಶೃಂಗೇರಿಗೆ ಕಳಿಸಿದ ೩-೧೦-೮೨ರ ನಮ್ಮ ಪತ್ರಿಕೆಯ ಕಟ್ಟು ಗೈರು ವಿಲೆ ಆದುದರಿಂದ ಅಲ್ಲಿನ ನಮ್ಮ ಓದುಗರಿಗೆ ಆ ಸಂಚಿಕೆ ತಲುಪಿಸಲಾಗಲಿಲ್ಲ. ಇದಕ್ಕಾಗಿ ವಿಷಾದಿಸುತ್ತೇವೆ.

ಜನತಾ ಸೈಟಿನ ಹೆಂಚು ಅಕ್ರಮ ವಿಲೆ ಆರೋಪ

ಗುಣವಂತೆ: ಇಲ್ಲಿನ ಸೀನಪ್ಪ ಶೆಟ್ಟಿ ಎಂಬ ಭೂರಹಿತನಿಗೆ ಮಂಜೂರಾಗಿದ್ದ ೭೫ ಹೆಂಚುಗಳಲ್ಲಿ ೭೫ನ್ನು ಇಲ್ಲಿನ ಗಣ್ಯರು ಹಾಗೂ ರಾಜಕೀಯ ಮುಖಂಡರೆನ್ನಿಸಿಕೊಂಡವರೊಬ್ಬರ ಮನೆಗೆ ಸಾಗಿಸಲಾಗಿದೆಯೆಂದು ಶಿವಾನಂದ ಯುವಕ ರೈತ ಸಂಘದವರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ದೂರಿತ್ತಿದ್ದಾರೆ. [illegible] ಹಾಜರಿಯಲ್ಲಿ ಕೃಷಿ ಸಹಾಯಕ ಶ್ರೀಕಂಠಯ್ಯ ತನಿಖೆ ನಡೆಸಿ ಸೀನಪ್ಪ ಶೆಟ್ಟರ ಹೇಳಿಕೆ ಪಡೆದಿದ್ದಾರೆಂದು ಗೊತ್ತಾಗಿದೆ.

ಮುಗ್ಧ ಬಡವರನ್ನು ದಾರಿ ತಪ್ಪಿಸುತ್ತಿರುವ ಮುಖಂಡರ ಮೇಲೆ ಉಗ್ರಕ್ರಮ ಕೈಗೊಳ್ಳಬೇಕೆಂದು ಯುವಕ ರೈತ ಸಂಘದ ಸದಸ್ಯರು ಒತ್ತಾಯಿಸಿದ್ದಾರೆ.

ಮಹಿಳಾ ಸಮಾಜಗಳು

ದುರ್ಗಾಂಬ ಮಹಿಳಾ ಸಮಾಜ

ಶಾಂತಿಗ್ರಾಮ: ಅಕ್ಟೋಬರ್ ೨ ರಂದು ಇಲ್ಲಿ ಶ್ರೀ ದುರ್ಗಾಂಬ ಮಹಿಳಾ ಸಮಾಜದ ಸ್ಥಾಪನೆಯಾಯಿತು. ಕೊಪ್ಪ ತಾ॥ ಅ॥ ಮಂ॥ ಸದಸ್ಯ ಜೆ. ಸಿ. ಸುಬ್ರಾವ್‌ರವರ ಅಧ್ಯಕ್ಷತೆಯಲ್ಲಿ ಮರುಗುಣಿ ಎಸ್ಟೇಟಿನ ಶ್ರೀಮತಿ ಲೀನಾ ಸಾಲ್ಡಾನ್ ಉದ್ಘಾಟಿಸಿದರು. ಮೇಗೂರು ಪಂಚಾಯ್ತಿ ಅಧ್ಯಕ್ಷ ಎಸ್. ಅಬ್ದುಲ್ ರಹಮಾನ್ ಮುಖ್ಯ ಅತಿಥಿಗಳಾಗಿದ್ದರು.

ಕು॥ ಜಯಂತಿ ಯವರಿಂದ ಪ್ರಾರ್ಥನೆಯ ನಂತರ ಸಮಾಜದ ಅಧ್ಯಕ್ಷಿಣಿ ಶ್ರೀಮತಿ ಎನ್. ಎಸ್. ಪದ್ಮಾಕ್ಷಿ ಸ್ವಾಗತಿಸಿದರು. ಕು॥ ಕೆ. ಜಿ. ವೀಣಾಪಾಣಿ ವರದಿ ಓದಿದರು. ಕಾರ್ಯದರ್ಶಿನಿ ಕು॥ ಕೆ. ಪಿ. ಗಾಯಿತ್ರಿ ವಂದಿಸಿದರು.

ಪಾರ್ವತಿ ಮಹಿಳಾ ಸಮಾಜ

ಮೆಣಸಿನಹಾಡ್ಯ: ಅತ್ತಿಕೊಡಿಗೆ ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಿ. ಎನ್. ವಾಸುದೇವ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಇಲ್ಲಿನ ಪಾರ್ವತಿ ಮಹಿಳಾ ಸಮಾಜವನ್ನು ಸಹಾಯಕ ಕೃಷಿ ನಿರ್ದೇಶಕ ಎಂ. ಎಸ್. ಸುಬ್ಬಯ್ಯ ಗೌಡರು ಉದ್ಘಾಟಿಸಿದರು. ಶ್ರೀಮತಿ ಎ. ಎಲ್. ಪುಟ್ಟಮ್ಮ ಅಧ್ಯಕ್ಷೆ ಹಾಗೂ ಶ್ರೀಮತಿ [illegible] ಸರೋಜ ಕಾರ್ಯದರ್ಶಿಗಳಾಗಿರುವ ೯ ಜನರ ಸಮಿತಿಯನ್ನು ರಚಿಸಲಾಯಿತು.

ಶಾನುವಳ್ಳಿಯಲ್ಲಿ ಗಾಂಧಿ ಜಯಂತಿ

ಶಾನುವಳ್ಳಿ: ಇಲ್ಲಿನ ಗ್ರಾಮ ಪಂಚಾಯ್ತಿ ಆಶ್ರಯದಲ್ಲಿ ಅ. ೨ ರಂದು ತಾ॥ಅ॥ ಮಂ॥ ಸದಸ್ಯ ಮೂಗ ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಯಿತು.

ಸಭೆಯಲ್ಲಿ ಗ್ರಾಮಪಂಚಾಯ್ತಿ ಸದಸ್ಯ ಸದಾಶಿವ ಭಟ್ಟ ಮಾತನಾಡಿದರು ಶೇ.೧೮ರ ಗ್ರಾಂಟ್ ನಿಂದ ಹರಿಜನ ಗಿರಿಜನ ಮಕ್ಕಳಿಗೆ ಪಂಚಾಯ್ತಿ ಉಪಾಧ್ಯಕ್ಷ ಎಂ. ವಿ. ಶೀನಪ್ಪಗೌಡ ಬಟ್ಟೆ ಹಂಚಿದರು. ಶ್ರಮದಾನದಲ್ಲಿ ರಸ್ತೆ ಕಡಿಯಲಾಯ್ತು.

ಸಭೆಯಲ್ಲಿ ಶಾಲಾ ಅಧ್ಯಾಪಕ ಮರಿಗೌಡ ಸ್ವಾಗತಿಸಿ ಮುಖ್ಯೋಪಾಧ್ಯಾಯ ಶೇಷಗಿರಿ ನಾಯ್ಕ ವಂದಿಸಿದರು.

ಹೆದ್ಸೆ ಕೊಲೆ ಪ್ರಕರಣ:

ಆರೋಪಿಗಳ ಖುಲಾಸೆ

ಕೊಪ್ಪ: ಹೆದ್ಸೆ ಕೃಷ್ಣ ಭಟ್ಟರನ್ನು ಕೊಲೆ ಮಾಡಿದ ಆರೋಪದ ಮೇಲೆ ಚಿಕ್ಕಮಗಳೂರಿನ ಸೆಷನ್ಸ್ ನ್ಯಾಯಾಧೀಶ ವೇಣುಗೋಪಾಲ್‌ರವರಿಂದ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಕೊರಗ ಪೂಜಾರಿ, ನಾರಾಯಣ ಪೂಜಾರಿ ಮತ್ತು ಬಾಲಸುಬ್ರಮಣ್ಯ ಅವರುಗಳನ್ನು ರಾಜ್ಯದ ಶ್ರೇಷ್ಠ ನ್ಯಾಯಾಲಯ ಆರೋಪದಿಂದ ಖುಲಾಸೆ ಮಾಡಿ ತೀರ್ಪಿತ್ತಿದೆ.

ಸೆಷನ್ಸ್ ನ್ಯಾಯಾಲಯದ ತೀರ್ಪು ಅಸಮರ್ಪಕವೆಂದೂ, ಅಪರಾಧ ಸಾಬೀತು ಪಡಿಸುವಲ್ಲಿ ಪ್ರಾಸಿಕ್ಯೂಷನ್ ಪೂರ್ಣ ವಿಫಲಗೊಂಡಿದೆಯೆಂದೂ ತನ್ನ ತೀರ್ಪಿನಲ್ಲಿ ಶ್ರೇಷ್ಠ ನ್ಯಾಯಾಲಯ ಅಭಿಪ್ರಾಯ ಪಟ್ಟಿರುವುದಾಗಿ ವರದಿಯಾಗಿದೆ.

ಕೊಪ್ಪದ ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರ್ ಟಿ. ಎ. ಹೊನ್ನಗಿರಿಯಪ್ಪ ತನಿಖೆ ನಡೆಸಿ ಮೊಕದ್ದಮೆ ಹೂಡಿದ್ದರು.

ಹಾಡೇ ಹಗಲು ಕೊಲೆ ನಡೆದಿದ್ದರೂ ಅಪರಾಧಿಗಳು ಯಾರೆಂದು ಪತ್ತೆಯಾಗದೆ ಹೋಗುವ ಸಾವಿರಾರು ಕೊಲೆಗಳ ಸಾಲಿಗೆ ಇದೂ ಸೇರಿದಂತಾಗಿದೆ. [illegible] ೧೯-೧-೮೨ರ '[illegible]' [illegible] ಓದುಗರಿಗೆ [illegible].

ಅಡಿಕೆ ಬೇಸುವ. ಖರ್ಚು, ಕಾಲ ಉಳಿಸಲು

ಬಹು ಉಪಯೋಗಿ 'ಸಿಪ್ಪೆ ಒಲೆ'

ಲೇಖಕರು : ಕೆ. ವಿ. ಶಿವಸ್ವಾಮಿ, ಕತ್ತಲಗಿರಿ, ಸೂರ್ಯದೇವಸ್ಥಾನ ಅಂಚೆ, ಕೊಪ್ಪ ತಾ||

ಅಡಿಕೆ ಕುಯ್ಲು ಬಂತೆಂದರೆ ಮಲೆನಾಡ ರೈತರಿಗೆ ಕೆಲಸದ ರಾಶಿಯೇ ಮೈಮೇಲೆ ಬಿದ್ದಂತೆ. ಬೇರೆ ಎಲ್ಲ ಕೆಲಸದ ಹೊರೆಗಳ ಜೊತೆಗೆ ವಿಶೇಷ ಅಡಿಕೆ ಬೇಸುವ ಒಲೆಗೆ ಸೌದೆ. ಕುಂಟೆ ಒದಗಿಸುವುದೊಂದು ದೊಡ್ಡ ತಲೆ ನೋವಿನ ಕೆಲಸ. ಅದರಲ್ಲೂ—ಸೌದೆಗೆ ನೊಡದೇ ಅಭಾವ; ಅದರ ಮೇಲೆ ದೊಣ್ಣೆನಾಯ್ಕರ ಕಾಟ. ಫಾರೆಸ್ಟ್ ಕಂಟ್ರ್ಯಾಕ್ಟರುಗಳು, ಎಸ್ಟೇಟುಗಳು, ಸರ್ಕಾರಿ ಕಾಡುಗಳನ್ನು ಬೆಳೆಸಲು ಬಯಲು ಮಾಡುವುದು, ಜಲ-ವಿದ್ಯುತ್ ಯೋಜನೆಗಳು, ಕುದುರೆಮುಖಗಳು, 'ನಿರಾಶ್ರಿತ' ರಾಗಿ ಬಂದು ನೆಲೆಸಿ, ಯಾವ ಎಗ್ಗಿಲ್ಲದೆ ಕಾಡು ಲೂಟಿ ಮಾಡಿ ಶ್ರೀಮಂತರಾಗುವ ಜನ-ಹೀಗೆ ಹಲವಾರು ವಾಕ್ಸ್‌ರೂಪದಲ್ಲಿ ಕಾಡು ಹೇಳ ಹೆಸರಿಲ್ಲದಂತೆ ಆಗುತ್ತಿದ್ದರೂ ತಡೆಯಲಾರದ—ಅಥವಾ ತಡೆಯ ಬಾರದೆಂದು ಹೇಳುವ ಸರ್ಕಾರ. ಆದರೆ ರೈತರು ತಲೆಮಾರುಗಳಿಂದ ಕಾಡಿನ ಜೊತೆಗೇ ಬದುಕಿ ಕಾಡನ್ನು ಬಳಸಿಯೂ ಅಳಿಸದೆ ಬೆಳೆಸಿಕೊಂಡು ಬರುತ್ತಿದ್ದರೆ ಅವರ ಮೇಲೆ ಆ ಸರ್ಕಾರದ ಬ್ರಹ್ಮಾಸ್ತ್ರ.

ಇಂಥ ಪರಿಸ್ಥಿತಿಯಲ್ಲಿ ರೈತರು ಸೌದೆಖರ್ಚು, ಕೆಲಸ ಎರಡನ್ನೂ ಉಳಿಸಲು ಒಲೆಯ ಮಾದರಿಗಳನ್ನು ಸುಧಾರಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಅಂಥವುಗಳಲ್ಲಿ ಒಂದು ಅಡಿಕೆ ಸಿಪ್ಪೆಯಿಂದ ಉರಿಯುವ 'ಸಿಪ್ಪೆ ಒಲೆ'. ಇದು ಅಡಿಕೆರೈತರಿಗೆ ಬಹಳ ಉಪಯುಕ್ತವಾಗಬಲ್ಲುದೆಂದು ಹೇಳಲಾಗಿದೆ. ಅದರ ಪರಿಚಯ ಈ ಲೇಖನ. ‡‡

೧೯೭೬ ರ ತುರ್ತು ಪರಿಸ್ಥಿತಿಗೂ ಸಿಪ್ಪೆ ಒಲೆಗೂ ನೇರ ಸಂಬಂಧ. ಎಲ್ಲಾ ವರ್ಷಗಳಂತೆ ಮಳೆಗಾಲಕ್ಕೂ, ಅಡಿಕೆ ಕೊಯಿಲಿಗೂ ಅಗತ್ಯವಿರುವ ಕಟ್ಟಿಗೆಯನ್ನು ಉಳಿದವರಂತೆ ನಾವೂ ಕಡಿದಿದ್ದೆವು. ಆದರೆ, ಉಳಿದವರಂತಲ್ಲದೆ ನಮ್ಮ ಕಟ್ಟಿಗೆಗೆ ೩೦೦ ರೂ.ಗಳ ಜುಲ್ಮಾನೆವಿಧಿಸಿದಾಗ ವಿಧಿಯಿಲ್ಲದೆ ನಾವು ಸೋದರರು ಕನಿಷ್ಠ ೧೫-೨೦ ಬಾರಿಬದಲಾವಣೆ ಮಾಡಿ ರೂಪಿಸಿದ ಒಲೆ 'ಸಿಪ್ಪೆ ಒಲೆ; ಅದು ಕಟ್ಟಿಗೆ, ಕಾಲ ಮತ್ತು ಕಾಡನ್ನು ಉಳಿಸಿದೆ. ಸಾರ್ವತ್ರಿಕವಾಗಿ ಅಡಿಕೆ ಬೇಯಿಸಲು ಈ ಒಲೆಯನ್ನು ರಚಿಸಿದರೆ ಮಲೆನಾಡು ಹಸಿರಾಗಿರುವುದರಲ್ಲಿ ಸಂದೇಹವಿಲ್ಲ.

ಸಾಮಾನ್ಯ ಜ್ಞಾನವಿರುವ ಯಾರೂ ರಚಿಸ ಬಹುದಾದ ಈ ಒಲೆಗೆ ತಗಲ ಬಹುದಾದ ವೆಚ್ಚ ಬಹು ಕಡಿಮೆ. ಇದಕ್ಕೆ ಅಗತ್ಯವಿರುವ ಸಾಮಗ್ರಿಗಳು:


೧. ಎರಡ ಇಲ್ಲವೆ ಬಗಸದ ಕಲ್ಲಿನ ಸರಳುಗಳು– ಎಂಟರಿಂದ ಹತ್ತು

೨. ಸುಮಾರು ೫೦ ಇಟ್ಟಿಗೆಗಳು

೩. ಒಂದು ಹೊಗೆ ಕೊಳವೆ(೪ ಅಂಗುಲ ವ್ಯಾಸದ ೮ ಅಡಿ ಕೊಳವೆ) ಇದನ್ನು ಇಟ್ಟಿಗೆಗಳಿಂದಲೂ ರಚಿಸಬಹುದು.

ಒಲೆಯ ಸರಳುಗಳಿಂದ ೯-೧೨ ಅಂಗುಲ ಜೆಂಕಿ ಉರಿಸಲು ಗಾಳಿ ಅಗತ್ಯ. ಅದ್ದರಿಂದ ಒಲೆಗಿಂತ ತಳದಲ್ಲಿ ಗಾಳಿಕಿಂಡಿ. ಈ ಕಿಂಡಿಗೆ ಸರಳಿನಿಂದ ರಚಿತವಾದ ಒಲೆಯಿಂದ ಬೂದಿ ಉದುರುತ್ತದೆ. ಎಂಟು,ಹತ್ತು ಸರಳುಗಳಿಂದ ರಚಿತವಾದ ಒಲೆಯ ಸರಳುಗಳನ್ನು ಗಾಳಿಕಿಂಡಿಗೆ ಸಮಾನಾಂತರವಾಗಿ, ಸಮಾನ ಅಂತರದಲ್ಲಿ (೦.೬ಅಂಗುಲ)ಜೋಡಿಸಲಾಗಿದೆ. ಗಾಳಿಕಿಂಡಿಯ ಮೇಲ್ಭಾಗದ ಎಡಪಕ್ಕದಲ್ಲಿ ಒಲೆಯ ಬಾಯಿ (೬ಅಂಗುಲ ಎತ್ತರ ೧೨ ಅಂಗುಲ ಉದ್ದ); ಸಾಮಾನ್ಯ ಒಲೆಯ ಬಾಯಿಗಿಂತ ಈ ಒಲೆಯ ಬಾಯಿ ತುಂಬಾ ಚಿಕ್ಕದು. ಒಲೆಯ ನಡುವಿನಿಂದ ಸುಮಾರು ೬ ಅಂಗುಲ ಎತ್ತರದಲ್ಲಿದೆ. ಇದು ಸಿಪ್ಪೆಯನ್ನು ದೂಡಲು ಅನುಕೂಲಕರವಾಗಿದೆ.

ಸುಮಾರು ೧೫೦ ಲೀಟರ್ ನೀರು ಹಿಡಿಯುವ ಹಂಡೆಯಲ್ಲಿ ಅಡಿಕೆ ಬೇಯಿಸಲು ಬೇಕಾಗುವ ಸಿಪ್ಪೆ ಸುಮಾರು ೨೦ ರಿಂದ ೨೫ ಕೆ.ಜಿ. (ಎರಡುವರೆಯಿಂದ ಮೂರು ಗೊಬ್ಬರದ ಬುಟ್ಟಿ) ಮತ್ತು ಅಡಿಕೆ ಬೇಯಲು ಬೇಕಾಗುವ ಕಾಲ ಎರಡರಿಂದ ಎರಡೂ ಕಾಲು ಗಂಟೆ.



ಮೇಲ್ಭಾಗದಲ್ಲಿ ಹಂಡೆಯನ್ನು ಮೂರು ಆಧಾರ ಇಟ್ಟಿಗೆಗಳ ಮೇಲೆ ನಿಲ್ಲಿಸಲಾಗಿದೆ. ಹಂಡೆಯ ಕುತ್ತಿಗೆಯ ಭಾಗ ಬರುವವರೆಗೂ ಹಂಡೆಗೂ ಮತ್ತು ಒಲೆಯ ಗೋಡೆಗೂ ೬ ಅಂಗುಲಗಳ ಅಂತರವಿರಿಸಲಾಗಿದೆ. ಇದು ಉರಿದ ಜೆಂಕಿಯ ಪೂರ್ಣ ಶಾಖ ಉಪಯೋಗವಾಗಲು ಅನುಕೂಲಕರ. ಈ ಭಾಗದಲ್ಲಿ ಮಸಿ(ಕಿಟ್ಟ) ಕಟ್ಟಿಕೊಳ್ಳುವುದರಿಂದ ತಿಂಗಳಿಗೊಮ್ಮೆ ಒಲೆ ಬಾಯಿಯ ಮುಖಾಂತರ ಸ್ವಚ್ಛ ಮಾಡುವುದು ಅಗತ್ಯ.

ಒಲೆ ಬಾಯಿಯ ವಿರುದ್ಧ ದಿಕ್ಕಿನ ಹಂಡೆಯ ಎಡ ಭಾಗದಲ್ಲಿ ಹೊಗೆ ಕೊಳವೆಯನ್ನು ರಚಿಸಿದೆ. ಈ ಕೊಳವೆ ಹಂಡೆಯ ಅರ್ಧಭಾಗಕ್ಕಿಂತ ಮೇಲೆ ಪ್ರಾರಂಭವಾಗುತ್ತದೆ. ಇದರಿಂದ ಹೊಗೆ ಒಲೆ ಬಾಯಿಂದ ಹೊರಕ್ಕೆ ಬರುವುದಿಲ್ಲ. ಹಂಡೆಯ ಕುತ್ತಿಗೆಯ ಭಾಗವನ್ನು ಭದ್ರವಾಗಿ ಎಲ್ಲಾ ಬದಿಯಿಂದಲೂ ಮುಚ್ಚಿದೆ. ಇದಿಷ್ಟು ರಚನಾಕ್ರಮ.

ಈ ಒಲೆಯಲ್ಲಿ ಅಡಿಕೆ ಬೆಂದಾಗ ಜೆಂಕಿ ಆರಿಸುವ ಅಗತ್ಯವಿಲ್ಲ. ಕೇವಲ ಸಿಪ್ಪೆಹಾಕುವುದನ್ನು ನಿಲ್ಲಿಸಿದರಾಯಿತು. ಅಡಿಕೆ ಬೇಯಿಸಿದ ದಿನ ಸಂಜೆ ಒಲೆಗೆ ಒಣಗಿದ ಸಿಪ್ಪೆಯನ್ನು ತುಂಬಿ ಬಿಟ್ಟರೆ ಕೇವಲ ಒಂದು ಹಾಳೆಯನ್ನು ಉರಿಸಿ ಒಲೆಯ ಒಳಗಿಟ್ಟರೆ ಉರಿಯಲು ಪ್ರಾರಂಭಿಸುತ್ತದೆ. ಆದರೆ ಅನಂತರ ಜೆಂಕಿ ನಂದಬಹುದೇನೋ ಎನ್ನುವಷ್ಟರಲ್ಲಿ ಹೆಚ್ಚು ಸಿಪ್ಪೆಯನ್ನು ಒಮ್ಮೆಗೇ ತುಂಬಿದರೆ ಒಮ್ಮೆಲೇ ಜೆಂಕಿ ಶಬ್ದದೊಡನೆ ಒಲೆಬಾಯಿಂದ ಹೊರಕ್ಕೆ ಬರುವ ಸಾಧ್ಯತೆ ಇರುವುದರಿಂದ ಸಿಪ್ಪೆಯನ್ನು ಸ್ವಲ್ಪ ಸ್ವಲ್ಪವಾಗಿ,ಕ್ರಮವಾಗಿ ಹಾಕುವುದು ಕ್ಷೇಮಕರ.

ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳು ಬೇಕಾದಲ್ಲಿ ಲೇಖಕರೊಡನೆ ವೈಯಕ್ತಿಕವಾಗಿ ಅಥವಾ ಪತ್ರದ ಮೂಲಕ ಸಂಪರ್ಕಿಸಬಹುದು. ‡‡

ದಲಿತರಿಗೆ ದನಿ ಬಂದರೆ....

ಶೃಂಗೇರಿ ತಾ|| ವೈಕುಂಠಪುರ ಗ್ರಾಮದ ಸ. ನಂ. ೬೧ ರಲ್ಲಿ ಅದೇ ಗ್ರಾಮದ ದಲಿತ ಸಿದ್ದಯ್ಯ ಎಂಬವರು ೨ ಎಕ್ರೆ ಭೂಮಿಗೆ ದರ್ಖಾಸ್ತು ಸಲ್ಲಿಸಿದ್ದರು. ಮೆಮೊರಾಂಡಂ ಪತ್ರಕ್ಕೆ ೬ ಜನ ಗ್ರಾಮಸ್ಥರ ಸಹಿ ಪಡೆದಿದ್ದರು. ಆದರೆ ಆ ಜಾಗವನ್ನು ಹಾಲಪ್ಪಗೌಡ ಎಂಬವರು ಒತ್ತುವರಿಯಲ್ಲಿ ಬಗರ್ ಹುಕುಂ ಜೇಲಿಹಾಕಿ, ಸಸಿ-ಬಾಳೆ ಹಾಕಿಸಿದರು.

ಸಿದ್ದಯ್ಯ ಸಂಬಂಧ ಪಟ್ಟವರಿಗೆಲ್ಲ ದೂರು, ಮನವಿ ಸಲ್ಲಿಸಿ ಪ್ರಯೋಜನವಾಗದಿದ್ದಾಗ (ಮನವಿ ಸಲ್ಲಿಸುವುದೇ ಪ್ರಮಾದವಾದಾಗ) ಶೃಂಗೇರಿ ತಾ|| ದಲಿತ ಸಂಘರ್ಷ ಸಮಿತಿ ಪ್ರಕರಣವನ್ನು ಕೈಗೆತ್ತಿಕೊಂಡಿತು. (೧೨-೯-೮೨ರ 'ಮುಂಜಾವು' ನೋಡಿ) ತಹಸೀಲ್ದಾರರಿಗೂ ಪೋಲೀಸರಿಗೂ ಕ್ರಮ ತೆಗೆದುಕೊಳ್ಳಲು ಗಡುವು ನೀಡಿ, ಅನಾಹುತಗಳೇದಾದರೂ ನಡೆದರೆ ಅವರೇ ಹೊಣೆಯಾಗಬೇಕೆಂದು ಎಚ್ಚರಿಸಿತು.

ಸೆ. ೫ ರಂದು ಜಮೀನಿನ ಬಳಿ ಸುತ್ತಮುತ್ತಲ ಗ್ರಾಮಗಳ ನೂರಕ್ಕೂ ಹೆಚ್ಚು ದಲಿತರು ಉದ್ವಿಗ್ನರಾಗಿ ಸೇರಿದಾಗ, ಪೋಲೀಸರೂ ತಹಸೀಲ್ದಾರರೂ ಬರಲೇ ಬೇಕಾಯಿತು. ಅದಕ್ಕೆ ಮೊದಲು ಸಿದ್ದಯ್ಯನನ್ನು ಕಡಿದು ಹಾಕುವುದಾಗಿ ಹಾಲಪ್ಪಗೌಡ ಮತ್ತು ಅವರ ಮಗ ರೋಪು ಹಾಕಿದ್ದರೆಂದು ಸಂಘರ್ಷ ಸಮಿತಿ ಕಾರ್ಯ ಕರ್ತರು ಹೇಳುತ್ತಾರೆ.

ಪರಿಸ್ಥಿತಿ ಎಷ್ಟು ಉದ್ರಿಕ್ತವಾಗಿದ್ದರೂ ಕಾರ್ಯಕರ್ತರು ಜನರನ್ನು ಕಡೆತನಕ ಹತೋಟಿಯಲ್ಲಿಟ್ಟಿರು. ಆದರೆ ಪೋಲೀಸರು ಕ್ರಮ ತೆಗೆದುಕೊಳ್ಳುವ ಸೂಚನೆ ಕಾಣದಿದ್ದಾಗ ದಲಿತರು ತಾನೇ ಸಸಿ ಕಿತ್ತು ಹಾಕಲು ಮುನ್ನುಗ್ಗಿದಾಗ ಪೋಲೀಸರು ಪ್ರವೇಶಿಸಿ, ಹಾಲಪ್ಪಗೌಡ ಮತ್ತು ಅವರ ಮಗನ ಕೈಯಿಂದಲೇ ಸಸಿಗಳನ್ನು ಕೀಳಿಸಿದರು.

ಇಷ್ಟಾದರೆ—ಆ ೨ ಎಕರೆ ಜಾಗ ಊರಿನ ಒಂದು ಕೆರೆಯ ಮೇಲ್ಭಾಗವಂತೆ. (ಕೆರೆಯ ಅಂಗಳ.) ಲೋಕೋಪಯೋಗಿ ಇಲಾಖೆಗೆ ಸೇರಿದ ಅದನ್ನು ಮಂಜೂರು ಮಾಡಬಹುದೇ ಎಂಬುದನ್ನು ಆ ಇಲಾಖೆ ಸೂಚಿಸಬೇಕಂತೆ.

ಈ ಮಧ್ಯೆ ದಲಿತರು ದುಂಡಾವರ್ತಿ ಮಾಡಿ ಸಸಿ ಕಿತ್ತುಹಾಕಿದರೆಂದೂ, ಅವರು "ಸರ್ಕಾರದ ವಿಶೇಷ ಕೃಪೆಗೆ ಪಾತ್ರರೆಂಬ" ಮುಲಾಜಿನಿಂದಾಗಿ ತಹಸೀಲ್ದಾರರೂ ಪೋಲೀಸರೂ ಕೈ ಕಟ್ಟಿದಂತಾಗಿದ್ದರೆಂದೂ ಒಂದು ಅಭಿಪ್ರಾಯ ಪ್ರಚಲಿತವಾಗಿದೆ. ಅವರು, ತಾವೇನು ಮಾಡಿದರೂ ಕೇಳುವವರಿಲ್ಲವೆಂಬಂತೆ ಅನ್ಯಾಯ ಮಾಡುತ್ತಿದ್ದಾರೆಂದು ಆಡಿಕೊಳ್ಳಲಾಗುತ್ತಿದೆ. ಆದರೆ ಸಂಘರ್ಷ ಸಮಿತಿ ಕಾರ್ಯಕರ್ತರು ಇದನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ.

ಲೋಕೋಪಯೋಗಿ ಇಲಾಖೆ ಈಗ, ಆ ಜಮೀನನ್ನು ಕೊಟ್ಟರೆ ಕೆರೆಗೆ, ಊರಿಗೆ ತೊಂದರೆಯಾಗುತ್ತದೆಂಬ ಅಭಿಪ್ರಾಯವನ್ನು ಮುಂದಿಡುತ್ತದೆಂದು ಕೆಲವು ಮೂಲಗಳು ಹೇಳುತ್ತವೆ. ಇದು ನಿಜವಾದಲ್ಲಿ ಒಂದೆರಡು ಪ್ರಶ್ನೆಗಳು ಏಳುತ್ತವೆ–

ಮೊದಲಿಗೆ, ಸದರಿ ಜಾಗ ಕೆರೆಯಂಗಳವಾಗಿರದೆ ಸರ್ಕಾರಿ ಜಾಗವಾಗಿದ್ದರೂ ಅದು ದಲಿತರಿಗೆ ದಕ್ಕದಂತೆ ಉಳ್ಳವರು ಹೀಗೇ

ಬೇಗಾರಿನಲ್ಲಿ ಮಂತ್ರಿ ಬೇಗಾನೆ

[ಬೇಗಾರಿನಲ್ಲಿ ಈಚೆಗೆ ನಡೆದ ಬೇಗಾನ ರಾಮಯ್ಯನವರ ಕಾರ್ಯಕ್ರಮವನ್ನು ಅಲ್ಲಿನ ಒಬ್ಬ ಸಾಮಾನ್ಯ ರೈತ ಯುವಕ ತಾನು ಕಂಡಂತೆ ವರದಿ ಮಾಡಿದ್ದಾನೆ. ತನ್ನ ಅನಿಸಿಕೆಗಳನ್ನೂ ಮಧ್ಯೆ ಮಧ್ಯೆ ಸೇರಿಸಿದ್ದಾನೆ. (ಅವನ ಭಾಷೆಯನ್ನು ಸ್ವಲ್ಪ ತಿದ್ದಿದ್ದೇವೆ.) ಈಗೀಗಲಷ್ಟೇ ತಮ್ಮ ಬಾವಿಯಿಂದ ಹೊರಗೆ ನೋಡಿ, ವಿಚಾರ ಬೆಳೆಸಿಕೊಳ್ಳುತ್ತಿರುವ ಸರಳ ಮುಗ್ಧ ಮನಸ್ಸಿನ ಹಳ್ಳಿಯ ರೈತರು ಇಂಥ ಕಾರ್ಯಕ್ರಮಗಳ ಬಗ್ಗೆ ಏನೆಂದುಕೊಳ್ಳುತ್ತಾರೆಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆಯಾಗಬಹುದೆಂದು ಪ್ರಕಟಿಸಿದ್ದೇವೆ. ಕೊನೆಯಲ್ಲಿ ತಾ|ಕಾಂಗ್ರೆ ಅಧ್ಯಕ್ಷ ಮಿಗ ಶ್ರೀನಿವಾಸ್ (ಅತ್ತೀಸರು) ಅವರ ಪ್ರತಿಕ್ರಿಯೆಯನ್ನೂ ಕೊಟ್ಟಿದೆ.

ಸಾಲ ಮನ್ನಾದಂಥ ಸರ್ಕಾರಿ ಕಾರ್ಯಕ್ರಮಗಳು ಹಳ್ಳಿಯಲ್ಲಿ ಹೇಗೆ ನಿಷ್ಫಲವಾಗಬಹುದು, ಹೇಗೆ ಸಾಲದ ಭೂತ ಒಂದಲ್ಲೊಂದು ರೀತಿ ಬಡವರನ್ನು ಕಾಡುತ್ತದೆ ಎಂಬುದಕ್ಕೂ ಈ ವರದಿಯಲ್ಲಿ ಒಂದು ನಿದರ್ಶನವನ್ನು ಗುರುತಿಸಿ. –ಸಂ.]

ಬೇಗಾರು: ರಾಜ್ಯದ ಗ್ರಾಮೀಣಾಭಿವೃದ್ಧಿ ಮಂತ್ರಿ ಬೇಗಾನ ರಾಮಯ್ಯನವರು ಸೆ. ೧೨ ರಂದು ಇಲ್ಲಿ 'ಭಾಗ್ಯಜ್ಯೋತಿ' ವಿದ್ಯುದ್ದೀಪ ಯೋಜನೆಯನ್ನು ಉದ್ಘಾಟಿಸಿ ಮಾತನಾಡುತ್ತ, ಪ್ರತಿಯೊಂದು ಕುಟುಂಬದವರೂ ಉದ್ಯೋಗಸ್ಥರಾಗಬೇಕು. ಇದಕ್ಕಾಗಿ ನಮ್ಮ ಐ ಆರ್ ಡಿ ಪಿ ಯೋಜನೆಯಲ್ಲಿ ಯಾವ ಉದ್ಯೋಗಕ್ಕೆ ಬೇಕಾದರೂ ಶೇ. ೩೩ ಸಬ್ಸಿಡಿಯ ಸಾಲ ಒದಗಿಸುತ್ತೇವೆ. ಅಧಿಕಾರಿಗಳೇ ಮನೆಗೆ ಬಂದು ಅದನ್ನು ಬೇಗಾರು ಸೊಸೈಟಿ ಅಥವಾ ಬ್ಯಾಂಕ ಮೂಲಕ ನಿಮಗೆ ಕೊಡಿಸುತ್ತಾರೆ ಎಂದರು. ಇದನ್ನು ಶ್ರೀಮತಿ ಇಂದಿರಾಗಾಂಧಿಯವರು ೧೯೮೦ ರ ಅಕ್ಟೋಬರ್ ೨ ರಂದು ಘೋಷಿಸಿದ್ದಾರೆಂದೂ ತಿಳಿಸಿದರು. (ಅದು ನಮ್ಮೂರಲ್ಲಿ ವಿತರಣೆಯಾದದ್ದು ೯-೯-೮೨)

೪,೮೦೦ ರೂ. ವರೆಗಿನ ಪ್ರಾಮಿಸರಿ ನೋಟಿನ ಸಾವ್ಕಾರಿ ಸಾಲಗಳನ್ನು ತೆಗೆದಿದ್ದೇವೆ ಎಂದು ಮಂತ್ರಿಗಳು ಹೇಳಿದಾಗ ಸಭೆಯಲ್ಲಿದ್ದ ಒಬ್ಬರು "ಅದು ಸರಿ. **ಆದರೆ 'ಕುರುಕು ಬಳ್ಳಿ' ಯಂತಹ ದೇವಸ್ಥಾನಗಳನ್ನು ತೆಗೆಯಿರಿ. ಏಕೆಂದರೆ ಸಾವ್ಕಾರ್ರುಗಳು ಅಲ್ಲಿಗೆಲ್ಲ ಹುಯ್ಲು ಕೊಟ್ಟಿದ್ದಾರೆ" ಎಂದರು.** (ಈ ಕಾಯ್ದೆ ಬಹುಶಃ ೧೯೭೬ ರಲ್ಲಿ ಬಂದಿದ್ದು, ರಾಮಯ್ಯನವರು ಆಗಿನ್ನೂ ಎಂ ಎಲ್ ಎ ಸಹ ಆಗಿರಲಿಲ್ಲ.)

ಬೇಗಾರಿಗೆ ಅವಶ್ಯಕವಾಗಿ ಬೇಕಾಗಿರುವ ಪ್ರೌಢ ಶಾಲೆಯನ್ನು ಕೇಳಿದಾಗ ಅನುಮಾನ ಮಾಡಿದ ಸಚಿವರು ಖಾಸಗಿ ಶಾಲೆಯಾದರೆ ಈಗ ಬೇಕಾದರೂ ಮಾಡಿಸಿ ಕೊಡುತ್ತೇನೆ. ಸರ್ಕಾರಿ ಶಾಲೆ ಈ ವರ್ಷ ಆಗುವುದಿಲ್ಲ ಎಂದರು.

ಮುರಿದು, ವಾಹನ ಸಂಚಾರ ಅಸ್ತವ್ಯಸ್ತಗೊಳಿಸಿರುವ ಸೇತುವೆ ಬಗ್ಗೆ ಕೇಳಿದಾಗ "ನಾಳೆಯೇ ಅಧಿಕಾರಿಗಳಿಗೆ ಹೇಳಿ ಅವರನ್ನು ಇಲ್ಲಿಗೆ ಕಳಿಸುತ್ತೇನೆ. ಕೂಡಲೇ ವ್ಯವಸ್ಥೆ ಮಾಡಿಸುತ್ತೇನೆ" ಎಂದರು.

ಕಾಡನ್ನು ಕಡಿಯ ಬಾರದು. ಆದರೆ ಕಟ್ಟಿಗೆಗೆ ತೊಂದರೆಯಾಗುತ್ತದೆ. ಅದಕ್ಕೆ ಬಯೋಗ್ಯಾಸ್ ಹಾಕಿಸಬೇಕು. ಇದಕ್ಕೆ ಹರಿಜನರಿಗೆ ಶೇ.೮೦ ಸಹಾಯಧನ ಇದೆ ಎಂದರು.

ಹೊಗಳುಭಟ್ಟರು

ಅತ್ತೀಸರು ಶ್ರೀನಿವಾಸ ಮಾತನಾಡಿ, ಮನಸ್ಸಿಗೆ ತೃಪ್ತಿಯಾಗುವಷ್ಟು ರಾಮಯ್ಯನವರನ್ನು ಹೊಗಳಿದರು. ರಾಮಯ್ಯನವರು ಮಂತ್ರಿಗಳಾದ ಮೇಲೆ ಶೃಂಗೇರಿ ತಾ|| ನಲ್ಲಿ ಬಹಳ ಕೆಲಸಗಳು ನಡೆದಿವೆ. ಶೃಂಗೇರಿ ತಾಲ್ಲೂಕನ್ನು ಹಿಂದೆ ನೋಡಿದವರಿಗೆ ಈಗ ಗುರುತೇ ಸಿಗದ ಹಾಗಾಗಿದೆ ಎಂದರು. ಅಭಿವೃದ್ಧಿಯನ್ನು ರಾಮಯ್ಯನವರು ಮಾಡಿದ್ದು ಎಂದರು. (ಅಲ್ಲಲ್ಲಿ ಮೋಹರಿ ಸೇತುವೆಗಳು ತುಂಡಾಗಿವೆ. ಅರಣ್ಯ ನಾಶವಾಗಿದೆ. ಹಾಗಾಗಿ ಗುರುತುಸಿಗುವಂತಿಲ್ಲ.) ಬಿದರಗೋಡಿನಿಂದ ಮಶಿಗೆ ಮೇಲಾಗಿ, ಹರಿಜನರು ವಾಸಿಸುವ ತಾರೊಳ್ಳಿ ಕೊಡಿಗೆಗೆ ಹೊಸ ರಸ್ತೆ ಮಾಡಲು ೫೦ ಸಾವಿರ ರೂ. ಮಂಜೂರಾಗಿರುವುದನ್ನೂ ಶ್ರೀನಿವಾಸ್ ಈ ಸಂದರ್ಭದಲ್ಲಿ ತಿಳಿಸಿದರು.

ಬಿದ್ರಗೋಡು ಪಂಚಾಯ್ತಿ ಅಧ್ಯಕ್ಷ ರಾಮಪ್ಪ ಹೆಗ್ಡೆ ಮಾತನಾಡಿ: "ಕೆಲವು ಅಹಂಕಾರದ ಅಧಿಕಾರಿಗಳಿಂದ ದಕ್ಷ ಸಚಿವರಿಗೆ ಕೆಟ್ಟ ಹೆಸರು ತರುತ್ತಾರೆ. **ಸೇತುವೆ ನೋಡಲು ಬಂದ ಇಂಜಿನಿಯರನ್ನು ಮಾತಾಡಿಸಿದರೆ ಅಹಂಕಾರ ಮಾಡಿದರು."** ಎಂದು ಆಪಾದಿಸಿದರು.

ಪ್ರಗತಿಪರ ರೈತ ಕೆ. ಎಸ್. ಚಂದ್ರಶೇಖರ್, "ಯಾವ ಮಂತ್ರಿಗಳೇ ಆಗಲಿ, ದಕ್ಷ ಅಧಿಕಾರಿಗಳ ಮೇಲೆ ಯಾವುದೇ ತರಹದ ವೈಯಕ್ತಿಕ ಒತ್ತಡಗಳನ್ನು ಹೇರಬಾರದು. ಅಧಿಕಾರಿಗಳೂ ಮಂತ್ರಿಗಳೂ ನ್ಯಾಯಬದ್ಧವಾಗಿ ಕೆಲಸ ಮಾಡಬೇಕು ಎಂದರು.

(೪ನೇ ಪುಟಕ್ಕೆ)

ಇದು ಚೋದ್ಯ

ಇದು ಚೋದ್ಯವಯ್ಯ, ಇದು ಚೋದ್ಯ
ಕತ್ತೆ ರಾಜನ ವಿಜಯದ ವಾದ್ಯ
ಕಳ್ಳ,ಲಫಂಗರು ಕಾವಿತೊಟ್ಟಿಹ ಇದು ಚೋದ್ಯ
ಗಾಂಧಿಯ ಹೆಸರಿನ ಹಿಂಸೆಯ ಸಾಧ್ಯ
ಕಪಿಗಳ ಹೆಸರಿನ ವಿವೇಕದ ಚೋದ್ಯ
ಇದು ಚೋದ್ಯವಯ್ಯ ಇದು ಚೋದ್ಯ
ಕತ್ತೆ–ಕಿರುಬನ ಸಂಗೀತದ ವಾದ್ಯ.
ಮಹಲು ಶ್ರೀಮಂತನ, ಗುಡಿಸಲು ಬಡವನ,
ಹೊಟ್ಟೆ ತುಂಬಿದ ಜನಗಳ ವಿಕಟ, ಹಸಿದ ಹೊಟ್ಟೆಯ ನರಕದ ಸಂಕಟ
ಇದು ಚೋದ್ಯವಯ್ಯ, ಇದು ಚೋದ್ಯ
ಸ್ವತಂತ್ರ ರಾಜ್ಯದ ಶೋಷಿತ ವ್ಯವಸ್ಥೆಯ ವಿಜಯದ ಈ ಸಾಧ್ಯ
ಇದು ಚೋದ್ಯವಯ್ಯವಿದು ಚೋದ್ಯ
ಕತ್ತೆಯ ಪುರಸ್ಕೃತ, ಕುದುರೆಯ ತಿರಸ್ಕೃತ,
ಅನರ್ಹನ ಬಹುಮತ, ಅಸಮಾನತೆ ಸತತ,
ಸ್ವತಂತ್ರ ಮನುಜನ ಬದುಕಿನ ಬಂಧನ
ಇದು ಚೋದ್ಯವಯ್ಯ ಇದು ಚೋದ್ಯ
ಕತ್ತೆ ರಾಜನ ವಿಜಯದ ವಾದ್ಯ
ಕತ್ತೆಗೆ ಗಾದಿ, ಕುದುರೆಗೆ ಬೀದಿ
ಕೋಗಿಲೆ ಕೂಗಿಗೆ ಇಲ್ಲದ ಮಾನ
ಕಾಗೆಯ ವಟ ವಟ ಪಡೆದಿದೆ ಬಹುಮಾನ
ಇದು ಚೋದ್ಯವಯ್ಯ, ಇದು ಚೋದ್ಯ
ಬಾನಲಿ ಹಾರುವ ಹಕ್ಕಿಯು ತಂತಾನೆ
ಪಂಜರ ಸೇರಿದೆ, ಬಂಧಿತವಾಗಿದೆ,
ಇದು ಚೋದ್ಯ

ಕಂ. ಕ. ಕೃಷ್ಣಮೂರ್ತಿ

ಮದುವೆ ಮಂಗಳಧಾಮ

ರಾಜ್ಯದಲ್ಲಿ ೧೯೮೫ ರೊಳಗೆ ಒಂದು ಲಕ್ಷ ಮದುವೆಯನ್ನಾದರೂ ನಿಶ್ಚಯಿಸಿ ಕೊಡಬೇಕೆಂದು ಮದುವೆ ಮಂಗಳಧಾಮದ ಮಾ.ನಂ. ಶ್ರೀಕಂಠಯ್ಯ ನಿಶ್ಚಯಿಸಿದ್ದಾರೆ.

ಬೆಂಗಳೂರು ಶಂಕರ ಮಠದ ರಸ್ತೆಯಲ್ಲಿರುವ ಮಂಗಳ ಧಾಮವು ರಾಜ್ಯದ ಕೆಲವು ಪ್ರತಿಷ್ಠಿತ ಧಾರ್ಮಿಕ ಮುಖಂಡರುಗಳ ಪ್ರೋತ್ಸಾಹದಿಂದ ವರದಕ್ಷಿಣೆ, ಆಡಂಬರದ ಮದುವೆಗಳನ್ನು ತಡೆಗಟ್ಟಲು ಕಡಿಮೆ ಖರ್ಚಿನ ವಿವಾಹ ಸಂಬಂಧಗಳನ್ನು ಪ್ರೋತ್ಸಾಹಿಸುತ್ತಿದೆ. ಈ ವರೆಗೆ ಸುಮಾರು ೧೫೦೦೦ ಕ್ಕೂ ಹೆಚ್ಚು ಮದುವೆಗಳನ್ನು ಏರ್ಪಡಿಸಿಕೊಟ್ಟಿದೆ.

ನಮ್ಮ ಸಮಾಜದಲ್ಲಿ ಕನ್ಯಾಪಿತೃಗಳು ವರಾನ್ವೇಷಣೆಗೆ ಹೊರಟು ಕೆಲವು ಏಜಂಟರುಗಳ ಕೈಗೆ ಸಿಕ್ಕಿಬಿದ್ದು ಬವಣೆ ಪಟ್ಟ ಹಾಗೂ ಪಡುತ್ತಿರುವುದನ್ನು ಕಂಡು ಪರಿಹಾರ ರೂಪವಾಗಿ ಸ್ಥಾಪಿಸಿದ ಸಂಸ್ಥೆಯೇ ಮಂಗಳಧಾಮ.

ಹಿಂದೂ ಧರ್ಮದ ಎಲ್ಲ ಪಂಗಡಗಳಿಗೂ ವಧೂವರರ ಮಾಹಿತಿಯನ್ನು ನೀಡುತ್ತಿರುವ ಈ ಸಂಸ್ಥೆಯಿಂದ ನಿಶ್ಚಿತ ಫಲ ಪಡೆಯಬಹುದು ಎಂದಿರುವ ಶ್ರೀಕಂಠಯ್ಯ ಸರ್ವರ ಸಹಕಾರ ವನ್ನೂ ಕೋರಿದ್ದಾರೆ.

ದಲಿತರಿಗೆ ದನಿ ಬಂದರೆ ....

(೨ನೇ ಪುಟದಿಂದ)

(ಪ್ರಯತ್ನ) ಮಾಡುತ್ತಿದ್ದರು. ದಲಿತರಿಗೆ ಗಟ್ಟಿ ನಿಂತು ನ್ಯಾಯ ಕೇಳುವ ಶಕ್ತಿ ಇದ್ದರೆ ಮಾತ್ರ 'ನ್ಯಾಯ' ಸ್ವಲ್ಪ ಬೇರೆ ರೀತಿ ಆಗುತ್ತಿತ್ತು. ಅಲ್ಲವೆ?

ಎರಡನೆಯದಾಗಿ, ಈಗ ಕೆರೆಯಂಗಳವೆಂದು ಲೋಕೋಪಯೋಗಿ ಇಲಾಖೆ ಜಾಗ ಬಿಟ್ಟುಕೊಡಲು ನಿರಾಕರಿಸಬಹುದು.

ಆದರೆ ಯಾರಾದರೂ ಶ್ರೀಮಂತರು ಅದನ್ನು ಒತ್ತುವರಿ ಮಾಡಿದ್ದರೆ ಹೀಗೆ ಹೇಳುವ 'ತಾಕತ್ತು' ಆ ಇಲಾಖೆಗೆ ಬರುತ್ತಿತ್ತೆ? ಅದಕ್ಕೆ ಗೊತ್ತೇ ಆಗುತ್ತಿರಲಿಲ್ಲ. ಒಂದು ವೇಳೆ ಊರವರು ಯಾರಾದರೂ ಪ್ರಶ್ನಿಸಿದ ಕಾರಣ ಅದು ಇಲಾಖೆಗೆತಿಳಿದರೂ, ಹಣ, ಪ್ರಭಾವ ಮೀರಿ ನಿಲ್ಲುವ ಶಕ್ತಿ ಆ ಇಲಾಖೆಗೆ ಇತ್ತೆ?

ಅಂದರೆ ಈ ಎರಡೂ ಸಂದರ್ಭಗಳಲ್ಲಿ ದಲಿತ ಸಂಘರ್ಷ ಸಮಿತಿಯಿಂದಾಗಿ ದಲಿತರಿಗೆ ಕೇಳುವ ಶಕ್ತಿ ಬಂದಿರುವುದೇ ಮುಖ್ಯ ಅಂಶವಾಗುತ್ತಲ್ಲವೆ?

ಇಲಾಖೆಗಳವರಾದರೂ—ಎಲ್ಲೂ ಎಂದೂ ಕಾನೂನಿನ **ನ್ಯಾಯಕ್ಕೆ** ತಕ್ಕಂತೆ ನಡೆಯಲಾರದವರು ದಲಿತರ ಪ್ರಶ್ನೆ ಬಂದಾಗ ಕಾನೂನಿನ ಕತ್ತಿಯನ್ನು ಅವರ ಮೇಲೆ ಛೂ ಬಿಡುವ ಮೊದಲು ಒಬ್ಬ ದಲಿತನ ಹೊಟ್ಟೆಪಾಡಿನ ಪ್ರಶ್ನೆಯನ್ನೂ ಮುಂದಿಟ್ಟುಕೊಂಡು ಯೋಚಿಸುವುದು ಯೋಗ್ಯ.

ಕರ್ನಾಟಕ ಅರಣ್ಯ ಇಲಾಖೆ
ಉಪಅರಣ್ಯ ಸಂರಕ್ಷಣಾಧಿಕಾರಿಯುವರ ಕಛೇರಿ, ಕೊಪ್ಪ.
ಸಂಕ್ಷಿಪ್ತ ಪ್ರಕಟಣೆ

ನಂ. ಟಿಬಿಆರ್–ಎಸ್ಎಸ್–ಸಿಆರ್–13–82–83, ದಿನಾಂಕ: 29–9–82.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೊಪ್ಪ ಅರಣ್ಯ ವಿಭಾಗದ ಈ ಕೆಳಕಂಡ ನಾಟಾ ಸಂಗ್ರಹಾಲಯಗಳಲ್ಲಿ ಇರತಕ್ಕ ನಾಟಾಗಳನ್ನು ಹಾಗೂ ಇತರೆ ಅರಣ್ಯ ಉತ್ಪನ್ನಗಳನ್ನು ಉಪಅರಣ್ಯಸಂರಕ್ಷಣಾಧಿಕಾರಿ ಅಥವಾ ಅಧಿಕಾರ ಪಡೆದ ಬೇರೆಯವರಾಗಲೀ ಬಹಿರಂಗ ಹರಾಜ ಮೂಲಕ ಮಾರಾಟ ಮಾಡುವರು. ಮಾರಾಟ ಪ್ರತಿದಿನ ಬೆಳಿಗ್ಗೆ 9–30 ಕ್ಕೆ ಪ್ರಾರಂಭವಾಗುತ್ತದೆ.

1) ಇಚ್ಛೆಯುಳ್ಳ ಬಿಡ್ಡುದಾರರು ಹರಾಜು ಮಾಡುವ ಅಧಿಕಾರಿಯೊಂದಿಗೆ ಕನಿಷ್ಠ 500–00 ರೂ.ಗಳನ್ನು ಠೇವಣಿಸಬೇಕು.
2) ಯಶಸ್ವಿ ಸವಾಲುದಾರನು ತಾನು ತೆಗೆದುಕೊಂಡ ನಾಟಾಗಳ ಕಿಮ್ಮತ್ತಿನ ಕಾಲು ಭಾಗ ಹಣವನ್ನು ಶೇ.8 ರಷ್ಟು ಮಾರಾಟ ತೆರಿಗೆ, ಶೇ. 8ರಷ್ಟು ಅರಣ್ಯ ಅಭಿವೃದ್ಧಿ ತೆರಿಗೆ, ಎಸ್.ಸಿ. ಶೇ. 10ರಷ್ಟು ಮಾರಾಟ ತೆರಿಗೆಯ ಮೇಲೆ ಮತ್ತು ಇತರೆ ಯಾವ ತೆರಿಗೆ ಪೂರ್ತ ಹರಾಜು ಮುಗಿದ ತಕ್ಷಣ ಪಾವತಿಸಬೇಕು. ತಪ್ಪಿದಲ್ಲಿ ತಾನು ತೆಗೆದುಕೊಂಡ ನಾಟಾಗಳ ಮೇಲಿನ ಹಕ್ಕನ್ನು ಕಳೆದುಕೊಳ್ಳುವುದಲ್ಲದೆ ಸದ್ರಿ ನಾಟಾಗಳನ್ನು ಮೂಲ ಸವಾಲುದಾರನ ಜವಾಬ್ದಾರಿ ಮೇರೆಗೆ ಮರು ಹರಾಜು ಮಾಡಲಾಗುತ್ತದೆ. ಮರು ಹರಾಜಿನಲ್ಲಿ ಸರ್ಕಾರಕ್ಕೆ ಆಗುವ ನಷ್ಟವನ್ನು ಮೂಲ ಸವಾಲುದಾರನು ತುಂಬಿಕೊಡತಕ್ಕದ್ದು.
3) ನಾಟಾ ಮತ್ತು ಇತರೆ ಅರಣ್ಯ ಉತ್ಪನ್ನಗಳ ಸವಾಲುದಾರನು ಸಂಬಂಧಪಟ್ಟ ಮಾರ್ಕೆಟಿಂಗ್ ಆಫೀಸರವರಿಂದ ಲೈಸೆನ್ಸು ಪಡೆದುಕೊಂಡಿರತಕ್ಕದ್ದು.
4) ಹರಾಜಿನ ವಿವರವಾದ ನಿಯಮ ಮತ್ತು ಶರತ್ತುಗಳನ್ನು ಉಪಅರಣ್ಯಸಂರಕ್ಷಣಾಧಿಕಾರಿಗಳು ಅಥವಾ ಸಂಬಂಧಿಸಿದ ಡಿಪೋ ಅಧಿಕಾರಿಗಳಲ್ಲಿ ಕಾರ್ಯಾಲಯದ ಸಮಯದಲ್ಲಿ ಪಡೆಯಬಹುದು.

ಕ್ರಮ ಸಂಖ್ಯೆ.	ಡಿಪೋ ಹೆಸರು.	ಹರಾಜಿನ ದಿನಾಂಕ.	ನಾಟಾ ಮತ್ತು ಇತರೆ ಅರಣ್ಯ ಉತ್ಪನ್ನದ ಅಂದಾಜು ಪ್ರಮಾಣ. ಜಾತಿ	ಲಾಟುಗಳು	ಪ್ರಮಾಣ
1)	ಸರ್ಕಾರಿ ನಾಟಾ ಸಂಗ್ರಹಾಲಯ, ನರಸಿಂಹರಾಜಪುರ.	29–10–82 ಮತ್ತು 30–10–82	ಬೀಟಿ	45–100.000	ಘ. ಮೀ.
			ಸಾಗುವಾನಿ	10–20.000	"
			ಹೊನ್ನೆ	120–85.000	"
			ಮತ್ತಿ	130–100.000	"
			ನಂದಿ	35–60.000	"
			ಹುನಾಲು	85–75.000	"
			ಜಂಬೆ	115–90.000	"
			ಇತರೆ ಜಾತಿಯವುಗಳು.	189–214.500	"
			ಬೀಟೀ ಬಿಲೆಟ್ಸ್	1–75 ಸಂಖ್ಯೆ.	
2)	ಸರ್ಕಾರಿ ನಾಟಾ ಸಂಗ್ರಹಾಲಯ, ಸಂಗಮೇಶ್ವರಪೇಟೆ, ಬಾಳೆಹೊನ್ನೂರು ವಲಯ.	2–11–82.	ಬೀಟಿ	3–2.762	"
			ಹೊನ್ನೆ	25–28.359	"
			ನಂದಿ	10–18.098	"
			ಮತ್ತಿ	27–64.332	"
			ಇತರೆ ಜಾತಿಯವುಗಳು—	71–144.430	"
			ಬಿದಿರು—	1–2275 ಸಂಖ್ಯೆ	
			ಸಾಗುವಾನಿ ಕಂಬಗಳು.	18–3333 ಸಂಖ್ಯೆ	
			ಆರ್.ಕೆ.ಬಿಲೆಟ್ಸ್.	1–19 ಸಂಖ್ಯೆ—1.315	"
			ಸೌದೆ.	1–4 ಟನ್.	
3)	ಸರ್ಕಾರಿ ನಾಟಾ ಸಂಗ್ರಹಾಲಯ, ಭಗವತಿ ಡಿಪೋ. ಕಳಸ ವಲಯ.	3-11-82.	ಬಲಗಿ	210–682.520	"
			ಹೈಗ	85 –271.007	"
			ಕಾಡುಜಾತಿ	38 –51.511	"
			ಇತರೆ ಜಾತಿಯವುಗಳು	20 –34.619	"
			ಬಲಗಿ ಸ್ಲೀಪರ್ ಕಟ್ ಎಂಡ್ ಪೀಸಸ್.	1–250 ಸಂಖ್ಯೆ –50.500	"
			ಸೌದೆ.	14–114.650	"
4)	ಶೃಂಗೇರಿ ಟಿಂಕೆ ಡಿಪೋ, ಶೃಂಗೇರಿ ವಲಯ.	4-11-82.	ಪೂನ್	30.111	"
			ನಂದಿ	108– 3.785	"
			ಹೊಳೆಗಾರ	8.888	"
			ಇತರೆ ಜಾತಿಯವುಗಳು	39.500	"
			ತಪ್ಪಿತಸ್ಥರ ಲಾಟುಗಳು	61–42.046	"
			ಸೌದೆ(ಮೆದು ಮರದ ತುದಿ ಹರೆಗಳದ್ದು)	18–424.346	"

(ಸಹಿ) ಕೆ. ಸುಂದರ ನಾಯಕ್,
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪ ವಿಭಾಗ, ಕೊಪ್ಪ.

ಓದುಗರ ಪತ್ರ

ಬಸ್ ವ್ಯವಸ್ಥೆ ಸರಿಪಡಿಸಿ

ಕೊಪ್ಪ -ತೀರ್ಥಹಳ್ಳಿ ಪಟ್ಟಣಗಳ ನಡುವಿನ ಸಂಪರ್ಕಕ್ಕೆ ಶಂಕರ್ ಕಂಪೆನಿ ಯವರು ಓಡಿಸುತ್ತಿರುವ ಬಸ್ಸುಗಳಲ್ಲೊಂದಾದ ಎಂ. ವೈ. ಜಿ. ೪೪೦೦ ಪ್ರಯಾಣಿಕರ ತಾಳ್ಮೆಯನ್ನು ಪರೀಕ್ಷಿಸುವಂತಿದೆ. ಅದರ ಸೀಟುಗಳು ಹರಿದುಹೋಗಿದ್ದು ಮೊಳೆಗಳು ಹೊರಬಂದಿವೆ. ಸೀರೆ-ಬಟ್ಟೆಗಳನ್ನು ಹರಿದುಕೊಂಡು ಶಪಿಸಿದವರೂ ಉಂಟು. ಈ ಬಸ್ಸು ತೀರ್ಥಹಳ್ಳಿಯಿಂದ ಹೊರಟರೆ ಕೊಪ್ಪ ಮುಟ್ಟುವುದೆಂಬ ಭರವಸೆ ಇಲ್ಲ! ವರ್ಷದಲ್ಲಿ ಹಲವಾರು ದಿನ ಪ್ರಯಾಣಿಕರೊಂದಿಗೆ ಮಾರ್ಗಮಧ್ಯೆ ಮೊಕ್ಕಾಂ ಹಾಕುತ್ತದೆ. ಕಂಪೆನಿಯವರಾದರೂ ಸರಿಯಾದ ಬಸ್ಸನ್ನು ಓಡಿಸಲಿ ಅಥವಾ ಸಂಬಂಧಪಟ್ಟ ಇಲಾಖೆಯವರಾಗಲಿ ಪರಿಶೀಲಿಸಿ ಉತ್ತಮ ರೀತಿಯ ಬಸ್ಸನ್ನು ಓಡಿಸುವ ವ್ಯವಸ್ಥೆ ಮಾಡಲಿ.

ಕೊಪ್ಪದಿಂದ ತೀರ್ಥಹಳ್ಳಿಗೆ ಮಧ್ಯಾಹ್ನ ೩ ಘಂಟೆಗೆ ಹೊರಡುವ ಬಸ್ಸು ಬಿಟ್ಟರೆ ಸಂಜೆ ೬ ಘಂಟೆ ವರೆವಿಗೆ ಒಂದು ಬಸ್ಸೂ ಓಡುತ್ತಿಲ್ಲ. ತೀರ್ಥಹಳ್ಳಿಯಿಂದಲೂ ಮಧ್ಯಾಹ್ನ ೧-೩೦ ಕ್ಕೆ ಹೊರಡುವ ಬಸ್ಸಿನ ನಂತರ ನೇರ ಕೊಪ್ಪಕ್ಕೆ ೪-೩೦ ಕ್ಕೆ ಮಾತ್ರ ಬಸ್ಸಿರುತ್ತದೆ. ಈ ನಡುವೆ ಶಂಕರ್ ನವರಾಗಲಿ ಅಥವಾ ಬೇರೆ ಕಂಪೆನಿಯವರಾಗಲಿ ಬಸ್ಸನ್ನು ರಹದಾರಿ ಪಡೆದು ಓಡಿಸಿ ಪ್ರಯಾಣಿಕರಿಗೆ ಸೌಲಭ್ಯವನ್ನು ಕಲ್ಪಿಸಲಿ ಎಂದು 'ಮುಂಜಾವು' ಪತ್ರಿಕೆಯ ಮೂಲಕ ಪ್ರಯಾಣಿಕರ ಪರವಾಗಿ ಕೇಳಿಕೊಳ್ಳುತ್ತೇನೆ.

—ಹೊ. ಸಿ. ರಮೇಶ, ಗಡಿಕಲ್

ಬೇಗಾರಿನಲ್ಲಿ ಬೇಗಾನೆ...

(೩ನೇ ಪುಟದಿಂದ)

ಶೃಂಗೇರಿ ತಾ. ಬಿ. ಮಂಡಳಿ ಅಧ್ಯಕ್ಷ ಕಳಸಪ್ಪ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಎ. ವಿ. ಶ್ರೀನಿವಾಸ ಸ್ವಾಗತಿಸಿ, ಬೇಗಾರು ಪಂ. ಅಧ್ಯಕ್ಷ ಕೆ. ಟಿ. ಸಂಜೀವಗೌಡ ವಂದಿಸಿದರು.

ಈ ಬಗ್ಗೆ ಮೂಗ ಶ್ರೀನಿವಾಸರನ್ನು ಸಂಪರ್ಕಿಸಿದಾಗ ಮೊದಲಿಗೆ 'ಯಾರೋ ವಿರೋಧ ಪಕ್ಷದವ ವರದಿ ಕಳಿಸಿರಬೇಕು' ಎಂದರು. ಆ ಹುಡುಗನಿಗೆ ಯಾವ ಪಕ್ಷವೂ ಇಲ್ಲ. ಪಕ್ಷ ಕಟ್ಟಿಕೊಂಡು ಅವನೇನೂ ಉದ್ಧಾರವಾಗುವುದಿಲ್ಲ ಎಂದಾಗ, "ರಾಮಯ್ಯನವರನ್ನೇನೂ ಹೊಗಳಲಿಲ್ಲ. ಅವರು ಕ್ಷೇತ್ರಕ್ಕೆ ಮಾಡಿದ ಕೆಲಸಗಳನ್ನಷ್ಟೇ ಹೇಳಿದ್ದು. ಶಾಲೆಗಳು, ಸೇತುವೆಗಳು, ರಸ್ತೆಗಳು, ಕೊಳವೆ ಬಾವಿಗಳು ಮುಂತಾಗಿ ಬೇಕಾದಷ್ಟು ಕೆಲಸ ಆಗಿದೆ. ಬೇಕಾದಷ್ಟು ಜನರಿಗೆ ಸಾಲ ಒದಗಿಸಿದೆ. ೩೫ ವರ್ಷಗಳಲ್ಲಿ ಆಗದಿದ್ದಷ್ಟು ಕೆಲಸ ರಾಮಯ್ಯನವರು ೩ ವರ್ಷದಲ್ಲಿ ಮಾಡಿದ್ದಾರೆ. ಇದನ್ನೆಲ್ಲ ಹೇಳಲೇ ಬೇಕಿಲ್ಲ. ಮುಂದೆ ಇರುವುದೇ ಎಲೆಕ್ಷನ್ನು!" ಎಂದು ಇದ್ದುದಿದ್ದಂತೆ ಸ್ಪಷ್ಟಪಡಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.